# ಆಹಾ ಸುದ್ದಿ!

★ ಸಸಿತೋಟ



ಜಾಗತಿಕವಾಗಿ ಯಾವುದೇ ಪ್ರಮುಖ ಕಾರ್ಯಕ್ರಮ ನಡೆದರೂ ಚೀನಾ ಅದಕ್ಕೆ ಪ್ರತಿಯಾಗಿ ತಾನೇ ಪ್ರತ್ಯೇಕ ಎಂದು ತೋರಿಸಿಕೊಳ್ಳಲು ಹೆಣಗುತ್ತದೆ. ಈ ಕೆಸರುಗದ್ದೆ ಫುಟ್ಬಾಲ್ ಪಂದ್ಯಾವಳಿ ಬ್ರೆಜಿಲ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗೆ ಸಮವಂತೆ. ದೇಶದ 32 ತಂಡಗಳನ್ನು ಸೇರಿಸಿ ಈ ಪಂದ್ಯಗಳನ್ನು ನಡೆಸುತ್ತಿದೆ. ಬಿದ್ದರೂ ಮೀಸೆ ಮಣ್ಣಾಗಿಲ್ಲ ಎಂದು ಮೈಗೆಲ್ಲ ಕೆಸರು ಅಂಟಿಸಿಕೊಳ್ಳಬಹುದೇ?

ಸ್ಕೈ ಸ್ಪೋರ್ಟ್ಸ್‌ನ ಫುಟ್ಬಾಲ್ ಪಂಡಿತ ಕ್ರಿಸ್ ಕಮಾರಾ ತನ್ನ 56ನೇ ವಯಸ್ಸಿನಲ್ಲಿಯೂ ಫುಟ್ಬಾಲ್ ಆಡಬಲ್ಲೆ ಎಂದು ತೋರಿಸಿದ್ದಾನೆ, ಫುಟ್ಬಾಲ್ ಹಿಂದೆ ಓಡಿದಂತೆ ಕಳ್ಳನ ಹಿಂದೆ ಓಡಿ ಹಿಡಿಯುವ ಮೂಲಕ. ಬ್ರೆಜಿಲ್‌ನ ರಸ್ತೆಯಲ್ಲಿ ಕಳ್ಳನೊಬ್ಬ ವ್ಯಕ್ತಿಯ ಚಿನ್ನದ ಚೈನ್ ಕದ್ದು ಓಡುತ್ತಿದ್ದಾಗ ಕಮಾರಾ ಆತನ ಹಿಂದೆ ಓಡಿ ಹಿಡಿದು ಪೊಲೀಸ್‌ಗೆ ಒಪ್ಪಿಸಿದನಂತೆ. ಆದರೆ ಕಮಾರಾನನ್ನು ನಂಬದ ಪೊಲೀಸರು ಆತನನ್ನೇ ವಿಚಾರಣೆ ನಡೆಸಿದರಂತೆ. ಬೀದಿಯಲ್ಲಿ ಕಳ್ಳನ ಜೊತೆ ಫುಟ್ಬಾಲ್ ಆಡುವುದಕ್ಕಿಂತ ಮೈದಾನದಲ್ಲೇ ಫುಟ್ಬಾಲ್ ಆಡುವುದು ಮೇಲು ಎನಿಸಿರಬೇಕು ಕಮಾರಾನಿಗೆ.



ಬಿಲ್ಲು, ಬಾಣಗಳು ಆಧುನಿಕ ಶಸ್ತ್ರಾಸ್ತ್ರಗಳಾಗಿ ಹೊರಹೊಮ್ಮುತ್ತಿವೆಯೇ? ನ್ಯೂಯಾರ್ಕ್‌ನಲ್ಲಿ ಧನುರ್ವಿದ್ಯೆ ಹೇಳಿಕೊಡುವ ನೂರಾರು ಕೇಂದ್ರಗಳು ಹುಟ್ಟಿಕೊಂಡಿದ್ದು ನೋಡಿದರೆ ಹಳೆಯದೆಲ್ಲ ಮತ್ತೆ ರೆಟ್ರೊ ಫ್ಯಾಷನ್ ರೂಪದಲ್ಲಿ ಮರುಕಳಿಸುತ್ತಿವೆ ಎನಿಸುತ್ತದೆ.

ಗೆಳತಿ ಕೈ ಕೊಟ್ಟಾಗ ಸುಮ್ಮನೆ ಮನೆಗೆ ಮರಳದ ಮಿಸ್ಸೋರಿ ಯುವಕ ಆಕೆಯ ಸಾಕು ನಾಯಿಯನ್ನು ಕಟ್ಟಡದಿಂದ ಬಿಸಾಕಿ ಈಗ ಜೈಲು ಕಂಬಿ ಎಣಿಸುತ್ತಿದ್ದಾನೆ. ಯುವಕ ವಿಲಿಯಂನ ಗೆಳತಿ ಗೇಬ್ರಿಯಲ್ ಬಸ್‌ನಲ್ಲೇ ಆತನ ಸ್ನೇಹಕ್ಕೆ ಟಾಟಾ ಹೇಳಿದಳಂತೆ. ಕೆರಳಿದ ವಿಲಿಯಂ ಆಕೆಯ ಮನೆಗೆ ನುಗ್ಗಿದ. ಮಾಜಿ ಗೆಳತಿ ಕೈಗೆ ಸಿಗದಿದ್ದಾಗ ಆಕೆಯ ನಾಯಿ ಮರಿಯನ್ನು ಕಟ್ಟಡದ ಮೂರನೇ ಅಂತಸ್ತಿನಿಂದ ಬಿಸಾಕಿದನಂತೆ. ಗೆಳತಿಯನ್ನು ನಾಯಿಮರಿಗೆ ಹೋಲಿಸಿ ಕೃತ್ಯ ಎಸಗಿದೆ ಎಂದರೆ ಪೊಲೀಸರು ಸುಮ್ಮನಿರುತ್ತಾರೆಯೇ?



ಚೀನಾದ ಚಾರಣಿಗನೊಬ್ಬ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ಚಿತ್ರ. ಚಾರಣದ ಸಂದರ್ಭದಲ್ಲಿ ನಿಸರ್ಗದ ಕರೆಗೆ ಓಗೊಡಲು ಹೋದಾಗ ಅದೇ ಕರೆಗೆ ಸ್ಪಂದಿಸುತ್ತಿದ್ದ ಅನ್ಯಗ್ರಹದ ಜೀವಿಯ ಚಿತ್ರ ತೆಗೆದೆ ಎಂದು ಹೇಳಿಕೊಂಡ. ಈ ಚಿತ್ರ 30 ಸಾವಿರ ಬಾರಿ ರೀ- ಪೋಸ್ಟ್ ಆಗಿದೆ. ಆಮೇಲೆ ಬಂತು ಜಾಹೀರಾತಿಗಾಗಿ ಅನ್ಯಗ್ರಹದ ಜೀವಿಯ ಮೇಕಪ್ ಧರಿಸಿದ ನಟನ ಸ್ಪಷ್ಟನೆ, ಜೊತೆಗೆ ಮೇಕಪ್ ಹಾಕುತ್ತಿರುವ ಚಿತ್ರ. ಅಷ್ಟರವರೆಗೆ ಟಿ.ವಿ.ಯಲ್ಲಿ ಎಷ್ಟು ಬಿಸಿ ಬಿಸಿ ಚರ್ಚೆಗಳಾದವೋ!




ಲಂಡನ್ನಿನ ವೇಲ್ಸ್‌ನಲ್ಲಿ ಈ ಯುವಕ ಕಾರಿನ ಮೇಲೆ ಜಿಗಿಯುತ್ತಿರುವ ಚಿತ್ರವನ್ನು ತೆಗೆಸಿಕೊಂಡ. ಅಷ್ಟೇ ಆಗಿದ್ದರೆ ಒಳ್ಳೆಯದಿತ್ತು. ಆದರೆ ಅದನ್ನು ವೆಬ್‌ನಲ್ಲಿ ಹಾಕಿಕೊಂಡ. ಆ ಕಾರು 2,50,49061ರೂಪಾಯಿ (2,45,000 ಪೌಂಡ್) ಬೆಲೆಯ ಸೂಪರ್ ಕಾರು. ಈಗ ಕಾರಿನ ಬಾನೆಟ್ ಹಾಳಾಗಿದ್ದಕ್ಕೆ ಮಾಲೀಕ ಯುವಕನ ವಿರುದ್ಧ ಕ್ರಿಮಿನಲ್ ಕೇಸ್ ಹಾಕಿದ್ದಾನಂತೆ. ಸುಮ್ಮನಿರದ ಕೋತಿ ಅದೇನೋ ಮಾಡಿ ಸಿಕ್ಕಿ ಹಾಕಿಕೊಂಡಿತಂತೆ, ಹಾಗಾಗಿದೆ ಯುವಕನ ಸ್ಥಿತಿ.